# ಮತ್ತೆ ಮಾಧುರಿ!

ಮಾಧುರಿ ದೀಕ್ಷಿತ್‌ಗೀಗ 44 ವರ್ಷ. ಹಾಗೆಂದು ಬಾಲಿವುಡ್‌ನಲ್ಲಿ ಎರಡನೇ ಇನಿಂಗ್ಸ್ ಆರಂಭಿಸುವ ಯತ್ನವನ್ನು ಆಕೆ ಕೈಬಿಟ್ಟಿಲ್ಲ. ವಿಶಾಲ್ ಭಾರಧ್ವಾಜ್ ನಿರ್ಮಾಣದ 'ದೇಡ್ ಇಷ್ಕಿಯಾಂ' ಚಿತ್ರದಲ್ಲಿ ಮಾಧುರಿ ಮುಖ್ಯ ಪಾತ್ರವನ್ನು ಒಪ್ಪಿಕೊಂಡಿದ್ದಾಳೆ! ಕಳೆದ ವರ್ಷ ತೆರೆ ಕಂಡು ಹಿಟ್ ಆದ ವಿದ್ಯಾ ಬಾಲನ್ ಅಭಿನಯದ 'ಇಷ್ಕಿಯಾಂ' ಚಿತ್ರದ ಎರಡನೇ ಭಾಗವಿದು. ಆ ಚಿತ್ರದಲ್ಲಿ ನಾಸಿರುದ್ದೀನ್ ಷಾ ಮತ್ತು ಅರ್ಷದ್ ವಾರ್ಸಿ ಜತೆ ಕುಣಿದು ಕುಪ್ಪಳಿಸಿ ವಿದ್ಯಾ ಬಾಲನ್ ಭರ್ಜರಿ ಪ್ರಚಾರ ಪಡೆದಿದ್ದಳು. ಈಗ ಅದೇ ಪಾತ್ರಕ್ಕೆ ಮಾಧುರಿ ಆಯ್ಕೆಯಾಗಿದ್ದಾಳೆ. ಅಭಿಷೇಕ್ ಚೌಬೆ ನಿರ್ದೇಶನದ ಈ ಚಿತ್ರದ ಮೂಲಕ ಮಾಧುರಿಯ ಭರ್ಜರಿ ರಿಎಂಟ್ರಿ ಆಗುವ ನಿರೀಕ್ಷೆ ಬಾಲಿವುಡ್‌ನದ್ದು.





# ಶಾರೂಕ್ ಟೆನ್ಶನ್

ಶಾರೂಕ್ ಖಾನ್ ಸದ್ಯಕ್ಕೆ ಕ್ರಿಕೆಟ್‌ನಲ್ಲಿ ಬ್ಯುಸಿ. ಆತನ ಮಾಲೀಕತ್ವದ ಕೋಲ್ಕತ್ತಾ ನೈಟ್ ರೈಡರ್ಸ್ ಅಭಿಮಾನಿಗಳಿಗೆ ತಂಡದ ಆಟಗಾರರಿಗಿಂತ ಶಾರೂಕ್ ಮೇಲೆಯೇ ಹೆಚ್ಚು ನಂಬಿಕೆ! ಐಪಿಎಲ್ ಕ್ರಿಕೆಟ್‌ನಲ್ಲಿ ಮೊದಲ ಎರಡು ಪಂದ್ಯಗಳಲ್ಲಿ ಸೋತ ಕೋಲ್ಕತ್ತಾ ತಂಡ, ಕಳೆದ ವಾರ ಬೆಂಗಳೂರಿನಲ್ಲಿ ನಡೆದ ಪಂದ್ಯದಲ್ಲಿ ವಿಜಯ್ ಮಲ್ಯರ ತಂಡವನ್ನು ಮಣ್ಣು ಮುಕ್ಕಿಸಿದ್ದು ವಿಶೇಷ. ಪಂದ್ಯದುದ್ದಕ್ಕೂ ಪ್ರೇಕ್ಷಕರ ಗ್ಯಾಲರಿಯಲ್ಲಿ ಟೆನ್ಶನ್ ಮಾಡಿಕೊಂಡು ಓಡಾಡುತ್ತಿದ್ದ ಶಾರೂಕ್, ತಂಡ ಗೆದ್ದ ಬಳಿಕ ಮೈದಾನಕ್ಕೇ ಇಳಿದು ಪ್ರೇಕ್ಷಕರತ್ತ ಫ್ಲೈಯಿಂಗ್ ಕಿಸ್ ಒಗೆದದ್ದು ವಿಶೇಷ! ತಮ್ಮ ತಂಡ ಮಾಲೀಕನ ಖುಷಿ ನೋಡಿ ಆಟಗಾರರಿಗೂ ಅಚ್ಚರಿಯಾಯಿತಂತೆ.

ಇದಕ್ಕೂ ಮುನ್ನ ಜೈಪುರದ ಪಂದ್ಯದಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್ ತಂಡವು ರಾಜಸ್ತಾನ ರಾಯಲ್ಸ್ ವಿರುದ್ಧ ಪರಾಭವ ಅನುಭವಿಸಿತ್ತು. ಅವತ್ತೂ ಶಾರೂಕ್ ಗ್ಯಾಲರಿಯಲ್ಲಿ ಟೆನ್ಶನ್ ತುಂಬಿಕೊಂಡು ಕುಳಿತಿದ್ದ. ತನ್ನ ತಂಡ ಸೋಲುವ ಲಕ್ಷಣ ಕಂಡಾಗಲೆಲ್ಲ ಒಂದೇ ಸಮನೆ ಸಿಗರೇಟು ಹೊಗೆ ಬಿಡುತ್ತಾ, ಅತ್ತ ಇತ್ತ ತಿರುಗಾಡುತ್ತಿದ್ದ. ಈತನ ಬುಸು ಬುಸು ಹೊಗೆ ಕುಡಿಯುವ ದೃಶ್ಯ ಟೀವಿ ಪ್ರಸಾರದಲ್ಲೂ ಎದ್ದು ಕಾಣುತ್ತಿತ್ತು. ಸಾರ್ವಜನಿಕವಾಗಿ ಧೂಮಪಾನ ನಿಷೇಧ ಇರುವ ರಾಜಸ್ತಾನದಲ್ಲಿ ಇದೀಗ ಶಾರೂಕ್ ವಿರುದ್ಧ ಮೊಕದ್ದಮೆ ದಾಖಲಾಗಿದೆ. ಜೈಪುರ ಕ್ರಿಕೆಟ್ ಅಸೋಸಿಯೇಶನ್ ಪರವಾಗಿಯೇ ಕೋರ್ಟಿಗೆ ಅರ್ಜಿ ಸಲ್ಲಿಸಲಾಗಿದ್ದು, ಶಾರೂಕ್ ದಂಡ ತೆರುವುದಕ್ಕೆ ಸಿದ್ಧನಾಗಿದ್ದಾನಂತೆ!

# ಅಮೀರ್ ಪ್ರಚಾರ

'ಸ್ಟಾರ್ ಪ್ಲಸ್' ಚಾನೆಲ್‌ನಲ್ಲಿ ಅಮೀರ್ ಖಾನ್‌ನ ರಿಯಾಲಿಟಿ ಷೋ 'ಪ್ರಮೋ'ಗಳು ಭರ್ಜರಿ ಪ್ರದರ್ಶನ ಕಾಣುತ್ತಿವೆ. ಇದೇ ಮೊದಲ ಬಾರಿಗೆ ಟೀವಿ ರಿಯಾಲಿಟಿ ಷೋ ಆ್ಯಂಕರ್ ಆಗುತ್ತಿರುವ ಅಮೀರ್, ಅದರ ಪ್ರಚಾರಕ್ಕಾಗಿ ವಿನೂತನ ಪ್ರಯೋಗಗಳನ್ನು ನಡೆಸಿದ್ದಾನೆ. ರಿಯಾಲಿಟಿ ಷೋದ ಶೂಟಿಂಗ್‌ನ ನೈಜ ಆಯ್ದ ತುಣುಕುಗಳನ್ನಷ್ಟೇ ತೋರಿಸುವ ಮೂಲಕ ಹೊಸ ರೀತಿಯ ಜಾಹೀರಾತು ತಂತ್ರ ಅನುಸರಿಸಿದ್ದಾನೆ. ಚಾನೆಲ್ ಕೂಡಾ ಈ ಪೂರ್ವಪ್ರಚಾರವನ್ನು ಗಂಭೀರವಾಗಿ ತೆಗೆದುಕೊಂಡಿದೆ. ಇತ್ತೀಚೆಗೆ ತನ್ನ 2000 ಜಾಹೀರಾತು ಸ್ಲಾಟ್‌ಗಳನ್ನು ಬ್ಲಾಕ್ ಮಾಡಿ, ಅಮೀರ್‌ನ ರಿಯಾಲಿಟಿ ಷೋ ಜಾಹೀರಾತಿಗೆ ನೀಡಿರುವ ಚಾನೆಲ್ ಅದಕ್ಕಾಗಿ ಖರ್ಚು ಮಾಡಿರುವ ಹಣದ ಮೊತ್ತ 6.25 ಕೋಟಿ ರೂಪಾಯಿಗಳಂತೆ. ಅಂದರೆ, ಇದೇ ಸ್ಲಾಟ್‌ಗಳನ್ನು ಬೇರೆ ಕಂಪೆನಿಗಳಿಗೆ ಕೊಟ್ಟಿದ್ದರೆ ಅಷ್ಟು ದುಡ್ಡು ಬರುತ್ತಿತ್ತು! ಸಲ್ಮಾನ್ ಖಾನ್‌ನಂತಹ ಸೂಪರ್‌ಸ್ಟಾರ್ ಕೂಡಾ ತನ್ನ ಸಿನಿಮಾದ ಜಾಹೀರಾತಿಗೆ ಮಾಡುವ ಖರ್ಚು 1–2 ಕೋಟಿಗಳಷ್ಟೆ. ಈಗ ಅಮೀರ್‌ನ ಟೀವಿ ಷೋ ಜಾಹೀರಾತು ಬಜೆಟ್ ಎಲ್ಲರ ಮೂಗಿನ ಮೇಲೆ ಬೆರಳೇರಿಸುವಂತೆ ಮಾಡಿವೆ. 'ಸತ್ಯಮೇವ ಜಯತೆ' ಎನ್ನುವುದು ಈ ರಿಯಾಲಿಟಿ ಷೋ ಹೆಸರು. 'ಇಷ್ಟೊಂದು ದುಡ್ಡು ಖರ್ಚು ಮಾಡ್ತೀರಲ್ಲ, ವಾಪಸ್ ಬರುತ್ತಾ?' ಎಂದು ಕೇಳಿದರೆ, 'ಸತ್ಯವಾಗ್ಲೂ ಇದರ ಮೂರು ಪಟ್ಟು ದುಡ್ಡು ವಾಪಸ್ ಬರುತ್ತೆ' ಎನ್ನುವುದು ಪ್ರೊಡಕ್ಷನ್ ಮ್ಯಾನೇಜರ್ ಉತ್ತರವಂತೆ! ಅಮೀರ್‌ಗೆ ಸದ್ಯಕ್ಕೆ ಶುಕ್ರದೆಸೆ. ಹೆಸರಲ್ಲೇ ಅಮೀರ್ (ಶ್ರೀಮಂತ) ಎಂದಿರುವಾಗ, ಆತನ ಷೋಗಳಿಗೆ ಬಡತನ ಕಾಡುವುದುಂಟೆ?



■ ಬಿಂದು